**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**– 180/2023 **DW**–1

**ದಿಃ 13.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀಮತಿ ಜೆಪಿಡಿ ರವರಿಂದಃ**

ಪ್ರಮಾಣ ಪತ್ರಕ್ಕೆ ತಾವೆ ಮಾಹಿತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮುಂದುವರೆದ ಪ್ರಮಾಣ ಪತ್ರವನ್ನು ಯಾಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ದೊಡ್ಡ ಮಗ ಕೇಸ ಕೊಟ್ಟಿರುತ್ತಾನೆ ಆದರೆ ಆತನ ಹೆಸರಿನಲ್ಲಿ ಯಾವುದೇ ದಾಖಲೆ ಇಲ್ಲ ಎನ್ನುತ್ತಾರೆ. ಹಿಂದಿನ ಯಾವ ದಾವಾದ ಬಗ್ಗೆ ದಾಖಲೆ ಹಾಕಿದ್ದೀರಿ ಎಂದರೆ ಸಾಕ್ಷಿ ಅಸಲು ದಾವಾ ನಂಬರ 150/2023 ವಜಾ ಆಗಿತ್ತು ಇದನ್ನು ವಜಾ ಮಾಡಿ ಎಂದು ಹಾಕಿರುತ್ತೇವೆ ಎನ್ನುತ್ತಾರೆ. ದಾವಾ ಸಂಖ್ಯೆ 129/2007 ರ ಬಗ್ಗೆ ಸಂಪೂರ್ಣ ಮಾಹಿತಿ ನಿಮಗೆ ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ದಾವಾ ಸಂಖ್ಯೆ 129/2007 ನ್ನು ಕಿರಣರವರು ನನ್ನ ಮೇಲೆ, ಕರ್ನಾಟಕ ಬ್ಯಾಂಕ ಮೇಲೆ ಮತ್ತು ನನ್ನ ದೊಡ್ಡ ಮಗ ಅರುಣ ಇವರ ಮೇಲೆ ಎನ್ನುತ್ತಾರೆ. ಕರ್ನಾಟಕ ಬ್ಯಾಂಕನಲ್ಲಿ ಯಾವ ವರ್ಷ ಸಾಲ ತೆಗೆದುಕೊಂಡಿದ್ದೀರಿ ಎಂದರೆ ನೆನಪಿಲ್ಲ ಸದರಿ ಸಾಲವನ್ನು ಔಷಧಿ ಪಾರ್ಮಗಾಗಿ ತೆಗೆದುಕೊಂಡಿದ್ದೇವು ಎನ್ನುತ್ತಾರೆ. ಎಷ್ಟು ಸಾಲ ಪಡೆದಿದ್ದೀರಿ ಎಂದರೆ ಸಾಕ್ಷಿ ರೂ. 8 ಲಕ್ಷ ಎನ್ನುತ್ತಾರೆ. ಸಾಲದ ಭದ್ರತೆಗಾಗಿ ಯಾವ ಆಸ್ತಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ 2671 ಹಾಗೂ 2672 ಕೊಟ್ಟಿದ್ದೇವು ಎನ್ನುತ್ತಾರೆ. ಸದರಿ ಸಿಟಿಎಸ ನಂಬರ 2671 ಆಸ್ತಿ ನನ್ನ ಮತ್ತು ನನ್ನ ಅಣ್ಣ ಇವರ ಜಂಟಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅದರ ಸಂಪೂರ್ಣ ಕ್ಷೇತ್ರ 92 ಸ್ಕ್ವೇರ ಯಾರ್ಡ ಇತ್ತು ಎಂದರೆ ಸರಿ. ಸದರಿ ಕರ್ನಾಟಕ ಬ್ಯಾಂಕ ಸಾಲವನ್ನು ನಾವು ಮರುಪಾವತಿ ಮಾಡದೆ ಇರುವ ಕಾರಣ ನಾವು ಬ್ಯಾಂಕಿನ ಸಾಲಕ್ಕೆ defaultor ಆದೇವು ಎಂದರೆ ಸರಿ. ವಸೂಲಾಯಿತಿ ಕ್ರಮ ಜರುಗಿಸಿ ಬ್ಯಾಂಕನವರು ನಮಗೆ ನೋಟೀಸ ನೀಡಿದ್ದರು ಎಂದರೆ ಸರಿ. ಬ್ಯಾಂಕಿನ ವಸೂಲಾಯಿತಿ ಕ್ರಮವನ್ನು ಅಡತಡೆ ಮಾಡುವ ಉದ್ದೇಶದಿಂದ ನನ್ನ ಮಗ ಕಿರಣ ಮೂಲಕ ಪಾಲು ವಿಭಾಗದ ದಾವಾ ಸಲ್ಲಿಸಲಾಗಿತ್ತು ಎಂದರೆ ಸಾಕ್ಷಿ ಸಮ್ಮನೆ ನಿಲ್ಲುತ್ತಾರೆ. ಕರ್ನಾಟಕ ಬ್ಯಾಂಕನ ಸಾಲಕ್ಕೆ ಸಿಟಿಎಸ ನಂಬರ 2671 ಆಸ್ತಿಯನ್ನು ಮಾತ್ರ ಒತ್ತೆ ಮಾಡಿದ್ದೇವು 2672 ಕೊಟ್ಟಿರಲಿಲ್ಲವೆಂದರೆ ಸರಿ. ದಾವಾ ಸಂಖ್ಯೆ 129/2007 ರಲ್ಲಿ ಎನು ವಾದಾಂಶಗಳು ಆಯಿತು ಎಂಬ ಬಗ್ಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ ಮಾಹಿತಿ ಇದೆ

ಎನ್ನುತ್ತಾರೆ. ಯಾವ ವಿವಾದಾಂಶ ಮಾಡಿದ್ದರು ಎಂದರೆ ಸಾಕ್ಷಿ ಸಾಲ ತೆಗೆದುಕೊಂಡ ಬಗ್ಗೆ ಮಾಡಿದ್ದರು ಎನ್ನುತ್ತಾರೆ. ವಿವಾದಾಂಶ 6 ರಲ್ಲಿ ವಾದಿ 1 ಮತ್ತು 2 ಇಬ್ಬರು ಸರಿಖಾಗಿ ಈ ದಾವಾ ಹಾಕಿರುತ್ತಾರೆಂದು ಹೇಳಿದ್ದರು ಎಂದರೆ ಸಾಕ್ಷಿ ಹೇಳಿದ್ದರು ಎನ್ನುತ್ತಾರೆ. ಆ ದಾವಾದಲ್ಲಿ ಆಸ್ತಿಯ ವಿವರಣೆ ಸಿಟಿಎಸ ನಂಬರ 2671 ಹಾಗೂ ಕ್ಷೇತ್ರ 92 ಸ್ಕ್ವೇರ ಯಾರ್ಡ ಎಂದರೆ ಸರಿ. ಸದರಿ ಆಸ್ತಿಯು ನನಗೆ ಮತ್ತು ನನ್ನ ಅಣ್ಣನಿಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಅಂದರೆ ನನ್ನ ಅಜ್ಜ ಗಳಿಸಿದ್ದು ಎಂದರೆ ಸರಿ. ನಾನು ಹಾಗೂ ನನ್ನ ಅಣ್ಣ ಚನ್ನಮಲ್ಲಪ್ಪ ಸದರಿ ಆಸ್ತಿಯನ್ನು ಯಾವಾಗ ಉಪವಿಭಾಗ ಮಾಡಿಕೊಂಡಿರಿ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಉಪವಿಭಾಗ ಆದ ನಂತರ ಸದರಿ ಆಸ್ತಿ 2671/1 ಮತ್ತು 2671/2 ಎಂಬುದಾಗಿ ಆಯಿತು ಎಂದರೆ ಸರಿ. ಉಪವಿಭಾಗ ಆದ ಆಸ್ತಿ ಸಿಟಿಎಸ ನಂಬರ 2671/1 ನನಗೆ ಬಂದಿತ್ತು ಎಂದರೆ ಸರಿ. ಸದರಿ ಆಸ್ತಿಯಲ್ಲಿ 451 ಸ್ಕ್ವೇರ ಪೀಟ್ ಒಟ್ಟು 3 ಅಂತಸ್ತಿನ ಬಿಲ್ಡಿಂಗ ಇದೆ ಎಂದರೆ ಸರಿ. ನನಗೆ ಬಂದಂತಹ 2671/1 ರ ಚಕಬಂಧಿ ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಉಪವಿಭಾಗ ಆಗುವುದಕ್ಕಿಂತ ಮೊದಲು 2671 ಇದ್ದಂತಹ ಆಸ್ತಿಯ ಚಕಬಂಧಿ ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಉಪ ವಿಭಾಗ ಆದ ನಂತರ ನನಗೆ ಬಂದಂತಹ ಕ್ಷೇತ್ರ 50/1/9 ಸ್ಕ್ವೇರ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈ ಆಸ್ತಿಯನ್ನು 2008 ನೇ ಸಾಲಿನಲ್ಲಿ ಉಪವಿಭಾಗ ಮಾಡಿಕೊಂಡೆವು ಎಂದರೆ ಸರಿ. ಸದರಿ ಆಸ್ತಿ ನಾನು ಸ್ವಂತ ಗಳಿಸಿದ್ದು ಅಲ್ಲವೆಂದರೆ ಸರಿ. ಸದರಿ ಆಸ್ತಿಯನ್ನು ನಾನು ಮಹಾದೇವಪ್ಪ ಇವರಿಗೆ ಮಾರಾಟ ಮಾಡಿದೇನು ಎಂದರೆ ಸಾಕ್ಷಿ ಬ್ಯಾಂಕಿನ ಸಾಲ ತುಂಬಲು ಮಾರಾಟ ಮಾಡಿರುತ್ತೇವೆ ಎನ್ನುತ್ತಾರೆ. ಪ್ರತಿವಾದಿ 3 ರವರಿಗೆ ಮಾರಾಟ ಮಾಡಿದ ಖರೀದಿ ಪತ್ರ ಓದಿದ್ದೀರಾ ಎಂದರೆ ಸಾಕ್ಷಿ ಓದಿದ್ದೇನೆ ಎನ್ನುತ್ತಾರೆ. ಸಾಕ್ಷಿ ನಿಶಾನೆ ಪಿ 3 ನ್ನು ಓದಿ ಅದರಲ್ಲಿ ಅಡಚಣೆಗೆಂದು ಬರೆದಿದ್ದೇವೆ ಅಡಚಣೆ ಎಂದರೆ ಬ್ಯಾಂಕಿನ ಸಾಲವೆ ಎಂದು ನುಡಿಯುತ್ತಾರೆ. ಖರೀದಿ ಪತ್ರದ ಕೊನೆಯ ಪ್ಯಾರಾ ಓದಿ ಎಂದರೆ ಸಾಕ್ಷಿ ನಿಶಾನೆ ಪಿ 3 ರ ಪುಟದ ಸಂಖ್ಯೆ 4 ಕೊನೆಯ ಪ್ಯಾರಾದಲ್ಲಿ ಇರುವುದನ್ನು ಅಂದರೆ ಸದರಿ ಖರೀದಿಗೆ ಕೊಟ್ಟ ಆಸ್ತಿಯ ಮೇಲೆ ಹಣದ ಬೋಜಾ ವ ಟಾಚ ಇರುವುದಿಲ್ಲ ಮತ್ತು ಬೇರೆದವರಿಗೆ ವತ್ತಿ, ಖರೀದಿ ವಗೈರೆ ಯಾವುದೇ ರೀತಿಯಿಂದ ಬರಕೊಟ್ಟು ಪರಾಧೀನ ಮಾಡಿರುವುದಿಲ್ಲಾ. ಅಂತಾ ನಾನು ನಿಮಗೆ ಖಾತ್ರಿಯಿಂದ ಹೇಳಿದ ಮಾತಿಗೆ ನಂಬಿ ನೀವು ನನ್ನ ಕೂಡಾ ಈ ಖರೀದಿ ವ್ಯವಹಾರ ಮಾಡಿರುತ್ತೀರಿ ಎಂದು ಬರೆದುಕೊಟ್ಟಿರುತ್ತೇನೆಂದರೆ ಸರಿ. ಆದೆ ರೀತಿ ಪುಟ 5 2 ನೇ ಖಂಡಿಕೆಯಲ್ಲಿ ಸದರಿ ಖರೀದಿಗೆ ಕೊಟ್ಟ ಆಸ್ತಿಯ ಬಗ್ಗೆ ಯಾವುದೇ ಕೋರ್ಟನಲ್ಲಿ ದಾವಾ ವಗೈರೆ ಆಗಿರುವುದಿಲ್ಲ ಮತ್ತು ಬಂಧಿ ಹುಕುಂ ಆಗಿರುವುದಿಲ್ಲಾ ಅಂತಾ ನಾನು ನಿಮಗೆ ಖಾತ್ರಿಯಿಂದ ಹೇಳಿ ದೃಢ ಪಡಿಸಿದ್ದೇನೆ ಎಂದು

ಹೇಳಿರುತ್ತೇನೆಂದರೆ ಸರಿ. ನಿಶಾನೆ ಪಿ 3 ಕ್ಕೆ ನನ್ನ ಚಿಕ್ಕ ಮಗ ಕಿರಣ ಮುಳಮುತ್ತಲ ಒಬ್ಬ ಸಹಿ ಮಾಡಿರುತ್ತಾನೆಂದರೆ ಸರಿ.



ಸದರಿ ದಾಖಲೆಗೆ ನನ್ನ ದೊಡ್ಡ ಮಗ ಅರುಣ ಸಹಿ ಮಾಡಿಲ್ಲವೆಂದರೆ ಸಾಕ್ಷಿ ಸಹಿ ಮಾಡಿಲ್ಲ ಆದರೆ ಆತನಿಗೆ ಒಪ್ಪಿಗೆ ಇತ್ತು ಎನ್ನುತ್ತಾರೆ.

ದಾವಾ ಸಂಖ್ಯೆ 129/2007 ರ ಆಸ್ತಿಯ ಬೇರೆ ಮತ್ತು ಈ ದಾವಾ ಆಸ್ತಿಯೆ ಬೇರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ದೊಡ್ಡ ಮಗ ಈಗ 2671/1 ಆಸ್ತಿಯ ಬಗ್ಗೆ ದಾವಾ ಹಾಕಿದ್ದಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. 2006 ಕ್ಕಿಂತ ಮುಂಚೆ ಕರ್ನಾಟಕ ಬ್ಯಾಂಕನಲ್ಲಿ ಸಾಲ ಮಾಡಿದ್ದರ ಬಗ್ಗೆ ಅಡತಡೆ ಮಾಡುವ ಸಲುವಾಗಿ ದಾವಾ ಸಂಖ್ಯೆ 129/2007 ಮತ್ತು ನನ್ನ ಹೆಂಡತಿ ಕಡೆಯಿಂದ ಮತ್ತೊಂದು ದಾವಾ ಇವುಗಳನ್ನು ಹಾಕಿಸಿದ್ದೇನೆಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ನನ್ನ ಹೆಂಡತಿ ಕಡೆಯಿಂದ ಅಸಲು ದಾವಾ ಸಂಖ್ಯೆ 157/2008 ಎಂದು ದಾವಾ ಹಾಕಿಸಿದ್ದೆ ಎಂದರೆ ಸಾಕ್ಷಿ ನೆನಪಿದೆ ಎನ್ನುತ್ತಾರೆ. ಆ ದಾವಾ ವಜಾ ಆಗಿದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಯ ಖರೀದಿ ಪತ್ರಕ್ಕೆ ಎಲ್ಲ ವಾರಸುದಾರರು ಕಾನೂನು ಪ್ರಕಾರ ಸಮ್ಮತಿ ಕೊಡಬೇಕೆಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣಕ್ಕೆ ದಾವಾ ಸಂಖ್ಯೆ 129/2007 ಹಾಗೂ ದಾವಾ ಸಂಖ್ಯೆ 180/2023 ಅಂದರೆ ಪ್ರಸ್ತುತ ದಾವಾ ಯಾವುದೇ ರೀತಿಯಿಂದಲೂ ಹೊಂದಾಣಿಕೆ ಆಗುವುದಿಲ್ಲ ಎಂದರೆ ಸರಿಯಲ್ಲ. ಆ ದಾವಾದಲ್ಲಿ ಕೇವಲ ಬ್ಯಾಂಕನ ಸಾಲದ ಬಗ್ಗೆ ಪ್ರಸ್ತಾವನೆ ಮಾಡಿದ್ದು ಆಸ್ತಿಯ ಹಕ್ಕಿನ ಬಗ್ಗೆ ಯಾವುದೇ ರೀತಿಯ ತೀರ್ಮಾನ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಸಂಖ್ಯೆ 129/2007 ರ ಆಸ್ತಿ ಹಾಗೂ ಪ್ರಸ್ತುತ ದಾವೆಯ ಆಸ್ತಿ ಎರಡು ಬೇರೆ ಬೇರೆ ಎಂದರೆ ಸಾಕ್ಷಿ ಒಂದೇ ಎನ್ನುತ್ತಾರೆ. ನಾನು ಪ್ರತಿವಾದಿ 3 ರವರ ಜೊತೆ ಶಾಮೀಲಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ